**ಸಾಕ್ಷಿಗೆ ದಿನಾಂಕಃ18-01-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ. H.R.U ವಕೀಲರಿಂದ ::**

ಅಡ್ಡಗದ್ದೆ ಗ್ರಾ.ಪಂ. ವ್ಯಾಪ್ತಿಯಲ್ಲಿ ಎಷ್ಟು ಗ್ರಾಮಗಳು ಬರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಅಡ್ಡಗದ್ದೆ ಗ್ರಾ.ಪಂ. ಕಛೇರಿಗೆ ಹಲವಾರು ವರ್ಷಗಳಿಂದ ಹೋಗಿ ಬರುತ್ತಿದ್ದೇನೆ ಎಂದರೆ ಸರಿ. ನಾನು ಹುಟ್ಟಿನಿಂದಲೂ ಸಹ ಅಡ್ಡಗದ್ದೆ ಗ್ರಾ.ಪಂ ವ್ಯಾಪ್ತಿಯಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ಸದರಿ ಅಡ್ಡಗದ್ದೆ ಗ್ರಾ.ಪಂ ವ್ಯಾಪ್ತಿಯಲ್ಲಿ ನಿವೇಶನ ರಹಿತರು ಸಾಕಷ್ಟು ಜನ ಇದ್ದಾರೆ ಎಂದರೆ ಸರಿ. ಸದರಿಯವರುಗಳು ಎಲ್ಲರೂ ಸಹ ನಿವೇಶನಕ್ಕಾಗಿ ಅಡ್ಡಗದ್ದೆ ಗ್ರಾ.ಪಂ. ಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಆ ಪ್ರಕಾರ ಅರ್ಜಿಯನ್ನು ಸಲ್ಲಿಸಿದ ನಂತರ ಅರ್ಜಿಗಳನ್ನು ಮೀಟಿಂಗ್ ನಲ್ಲಿ ಇಟ್ಟು ಯಾವ ಅರ್ಜಿಗಳನ್ನು ಊರ್ಜಿತಗೊಳಿಸಬೇಕು ಹಾಗೂ ಯಾವುದನ್ನು ವಜಾ ಗೊಳಿಸಬೇಕೆಂದು ತೀರ್ಮಾನ ಗೊಳಿಸುತ್ತಾರೆ ಎಂದರೆ ಸರಿ.

2. ಅದೇ ರೀತಿ 2021 ನೇ ಸಾಲಿನಲ್ಲಿ ಯಾರು, ಯಾರಿಗೆ ನಿವೇಶನವನ್ನು ನೀಡಬೇಕೆಂದು ಫಲಾನುಭವಿಗಳ ಪಟ್ಟಿಯನ್ನು ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು 2015 ನೇ ಸಾಲಿನ ಫಲಾನುಭವಿ ಪಟ್ಟಿಯಲ್ಲಿ ವಾದಿಯ ಆಯ್ಕೆ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಗ್ರಾಮ ಪಂಚಾಯಿತಿಯವರು ನಿವೇಶನ ವಿತರಿಸಲು ಆಯ್ಕೆ ಮಾಡಿದ ನಂತರ ಅವರಿಗೆ 30X40 ಅಡಿ ವಿಸ್ತೀರ್ಣದ ನಿವೇಶನ ನೀಡಲಾಗುತ್ತದೆ ಎಂದರೆ ಇರಬಹು ದು. ಸದರಿ ಗ್ರಾಮ ಪಂಚಾಯಿತಿಯವರಿಂದ ಆಯ್ಕೆ ಆದ ಫಲಾನುಭವಿಗೆ ಮಾಮೂಲಾಗಿ ಪಂಚಾಯಿತಿಯ ವ್ಯಾಪ್ತಿಯಲ್ಲಿ ಅವರ ಮಾಲಿಕತ್ವದಲ್ಲಿ ಯಾವುದೇ ಆಸ್ತಿಯು ಇರುವುದಿಲ್ಲ ಎಂದರೆ ಸರಿ. ಪಂಚಾಯಿತಿ ವ್ಯಾಪ್ತಿಯಲ್ಲಿ ಫಲಾನುಭವಿಗಳ ಪಟ್ಟಿಯಾದ ನಂತರ ಇಷ್ಟು ಜನ ಫಲಾನುಭವಿಗಳಿಗೆ ನಿವೇಶನ ನೀಡಬೇಕಾಗಿರುವುದರಿಂದ ಸರ್ಕಾರಿ ಜಾಗಗಳಲ್ಲಿ ವಾಸಕ್ಕೆ ಯೋಗ್ಯವಾದ ಸ್ಥಳದಲ್ಲಿ ಜಾಗವನ್ನು ಮಂಜೂರು ಮಾಡಿಕೊಡಲು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ.

3. ಅದೇ ರೀತಿ 2021 ರಲ್ಲಿ ಕೆಳಕೊಪ್ಪ ಗ್ರಾಮದ ಸರ್ವೆ ನಂ. 150 ರಲ್ಲಿ 1 ಎಕರೆ 10 ಗುಂಟೆ ಹಾಗೂ ಮತ್ತು ಸ.ನಂ.288 ರಲ್ಲಿ 2 ಎಕರೆ 10 ಗುಂಟೆ ಮಂಜೂರು ಮಾಡಿ ಕೊಡಬೇಕಾಗಿ ಪ್ರಸ್ತಾವನೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, 1996-97 ನೇ ಸಾಲಿನಲ್ಲಿ ಸ.ನಂ.150 ರಲ್ಲಿ 1 ಎಕರೆ 10 ಗುಂಟೆ ತಹಸೀಲ್ದಾರ್ ಮಂಜೂರಾತಿ ಆದೇಶ ಮಾಡಿರುತ್ತಾರೆ, ಅದು ಅಧಿಕೃತ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ-1 ರ ಪ್ರಕಾರ ಕೆಳಕೊಪ್ಪ ಗ್ರಾಮದ ಸ.ನಂ.150 ರಲ್ಲಿ ಜಿಲ್ಲಾ ಪಂಚಾಯಿತಿಗೆ 1 ಎಕರೆ 10 ಗುಂಟೆ ನಿವೇಶನ ಹಂಚಲು ಮಂಜೂರು ಆಗಿರುತ್ತದೆ ಎಂದರೆ ಸರಿಯಲ್ಲ.

4. ವಾದಿಯು ನನ್ನ ಸ್ನೇಹಿತ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ನಮ್ಮ ಗ್ರಾಮಸ್ಥರು ಎಂದು ನುಡಿಯುತ್ತಾರೆ. ವಾದಿಯು ನನಗೆ ಸ್ನೇಹಿತನಾಗಿದ್ದರಿಂದ ಸ.ನಂ. 150 ರಲ್ಲಿ 1 ಎಕರೆ 10 ಗುಂಟೆ ಜಮೀನು ನಿವೇಶನ ರಹಿತರಿಗೆ ನಿವೇಶನಕ್ಕಾಗಿ ಮಂಜೂರಾಗಿದ್ದರು ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2021 ರಲ್ಲಿ ಪಲಾನುಭವಿ ಪಟ್ಟಿ ಆಗಿದ್ದರೂ ಸಹ ಯಾವುದೇ ಪಲಾನುಭವಿಗೆ ಜಮೀನು ಮಂಜೂರು ಆಗಿಲ್ಲ ಎಂದರೆ ಸಾಕ್ಷಿಯು ಕೆಲವೊಬ್ಬರಿಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕೆಲವರ ಹೆಸಲು ನನಗೆ ಗೊತ್ತಿರುವುದಿಲ್ಲ.

5. ವಾದಿಯು ಈ ದಾವೆಯನ್ನು 2021 ರಲ್ಲಿ ಹೂಡಿರುತ್ತಾರೆ. ಈ ಬಗ್ಗೆ ನನಗೆ 2021 ರಲ್ಲಿಯೇ ತಿಳಿದು ಬಂದಿರುತ್ತದೆ. ನಾನು 2021 ನೇ ಸಾಲಿನಲ್ಲಿ ದಾವೆಯನ್ನು ಸಲ್ಲಿಸಲು ವಕೀಲರನ್ನು ಭೇಟಿ ಮಾಡಲು, ಸಲಹೆ ನೀಡಲು ಹೋಗಿರುವುದಿಲ್ಲ. ಸಾಕ್ಷಿಯು ಮುಂದುವರೆದು ಮನೆಯ ಹತ್ತಿರ ಬಂದು ಸಲಹೆ ಕೇಳಿರುತ್ತಾರೆ, ನಾನು ವಕೀಲರನ್ನು ಮಾಡಿ ಎಂದು ಸಲಹೆಯನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ವಾದಿಯು ಈ ದಾವೆಯನ್ನು ಗ್ರಾ. ಪಂ. ವಿರುದ್ಧ ಸಲ್ಲಿಸಿ ತಡೆಯಾಜ್ಞೆಯನ್ನು ಪಡೆದುಕೊಂಡಿದ್ದರಿಂದಲೇ, ಉಳಿದ ಯಾವುದೇ ಪಲಾನುಭವಿಗಳಿಗೂ ನಿವೇಶನ ಮಂಜೂರಾತಿ ಪತ್ರವನ್ನು ನೀಡಲು ಸಾಧ್ಯವಾಗಿರುವುದಿಲ್ಲ ಎಂದರೆ ಇರಬಹುದು ಎಂದು ನುಡಿಯುತ್ತಾರೆ.

6. ನಾನು ಸಹ ವಾಸದ ಮನೆಯನ್ನು ಕಟ್ಟಿರುತ್ತೇನೆ ಎಂದರೆ ಸರಿ. ಸದರಿ ಮನೆ ಸರ್ಕಾರಿ ಜಾಗದಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಮನೆಗೆ ಸಾಗುವಳಿ ಚೀಟಿಯನ್ನು ಸಹ ಪಡೆದಿರುತ್ತೇನೆ. ಸ.ನಂ. 154 ರಲ್ಲಿ ನಾನು ಮನೆ ಕಟ್ಟಿರುವ ಸ್ಥಳದಲ್ಲಿ ನನ್ನ ಅಣ್ಣನ ಹೆಸರಿಗೆ ಮಂಜೂರಾತಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಮಲ್ನಾಡ್ ನಲ್ಲಿ ಸಾಧಾರಣವಾಗಿ ಮನೆಗಳನ್ನು ಮಣ್ಣಿನ ಇಟ್ಟಿಗೆ, ಜಂಬಿಟ್ಟಿಗೆ ಮತ್ತು ಸಿಮೆಂಟ್ ಇಟ್ಟಿಗೆ ಗಳಿಂದ ಮನೆಯನ್ನು ಕಟ್ಟುತ್ತಾರೆ ಎಂದರೆ ಸರಿ. ಗೋಡೆಯನ್ನು ಗಾರೆ ಮಾಡದೇ ಇದ್ದರೆ ಸದರಿ ಗೋಡೆಗೆ ಉಪಯೋಗಿಸಿದ ಮಣ್ಣಿನ ಇಟ್ಟಿಗೆ, ಜಂಬಿಟ್ಟಿಗೆ ಮತ್ತು ಸಿಮೆಂಟ್ ಇಟ್ಟಿಗೆಯೇ ಎಂದು ನನಗೆ ಹೇಳಲು ಜ್ಞಾನ ಇದೆ ಎಂದರೆ ಸರಿ.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

ಸಹಿ/-

ಸಿ.ಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಃ

ಶೃಂಗೇರಿ.